# 3.11 KSISF– ಪೊಲೀಸ್ ಪೇದೆಗಳ (PSI) ನೇಮಕಾತಿ ಪರೀಕ್ಷೆ 2012

**ಸಮಯ : 90 ನಿಮಿಷ ಅರ್ಹತೆ : ಪದವಿ [C] ವಿಷಯ : ಸಾಮಾನ್ಯ ಅಧ್ಯಯನ 22–7–2012 ಗರಿಷ್ಠ ಅಂಕಗಳು : 150**

1. A+B ಎಂದರೆ A ಯು B ಯ ಮಗಳು ಎಂದು ಅರ್ಥ AXB ಎಂದರೆ A ಯು B ಯ ಮಗ ಮತ್ತು A–B ಎಂದರೆ A ಯು B ಯ ಹೆಂಡತಿ. ಹಾಗಾದರೆ PXQ-S
ಎ) S ಅವರು P ಯ ತಂದೆ ಬಿ) Q ಅವರು S ಅವರ ಮಗಳು ಸಿ) Q ಅವರು P ಅವರ ತಂದೆ ಡಿ) ಇವು ಯಾವುವೂ ಅಲ್ಲ.

2. ಒಂದು ತರಗತಿಯಲ್ಲಿ ಹುಡುಗರ ಸಂಖ್ಯೆಯು ಹುಡುಗಿಯರ ಸಂಖ್ಯೆಗಿಂತ ನಾಲ್ಕು ಪಟ್ಟು ಇದೆ. ಹಾಗಾದರೆ ಆ ತರಗತಿಯಲ್ಲಿರುವ ಸಂಖ್ಯೆಗಿಂತ ನಾಲ್ಕುಪಟ್ಟು ಇದೆ. ಹಾಗಾದರೆ ಈ ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ಈ ಕೆಳಕಂಡವುಗಳಲ್ಲಿ ಯಾವುದಾಗಿರಲು ಸಾಧ್ಯವಿಲ್ಲ.
ಎ) 40 ಬಿ) 45 ಸಿ) 42 ಡಿ) 50

3. ಬಟ್ಟೆಯೊಂದರ ತುಂಡಿನ ಬೆಲೆ ರೂ. 70 ಆ ಬಟ್ಟೆಯು ನಾಲ್ಕು ಮೀಟರ್ ಉದ್ದವಾಗಿದ್ದು ಅದರ ಪ್ರತಿ ಮೀಟರ್ ಬೆಲೆಯು ರೂ. 2 ಕಡಿಮೆ, ಆದರೆ ಅದರ ಬೆಲೆಯು ಬದಲಾಗುವುದಿಲ್ಲ ಹಾಗಾದರೆ ಆ ಬಟ್ಟೆಯ ಉದ್ದ ಎಷ್ಟು?
ಎ) 8 ಮೀ ಬಿ) 9 ಮೀ ಸಿ) 10 ಮೀ ಡಿ) 12 ಮೀ

4. 1,2,3 ಮತ್ತು 8 ಅಂಕಿಗಳನ್ನು ಬಳಸಿ 23000ಕ್ಕಿಂತ ದೊಡ್ಡದಾಗಿರುವ ಎಷ್ಟು ಸಂಖ್ಯೆಗಳನ್ನು ಮಾಡಬಹುದು?
ಎ) 90 ಬಿ) 120 ಸಿ) 200 ಡಿ) 150

5 ಪೆಟ್ರೋಲಿಯಂ ಈ ಕೆಳಗಿನ ಯಾವುದರ ಸಂಕೀರ್ಣದ ಮಿಶ್ರವಾಗಿದೆ?
ಎ) ಕಾರ್ಬೋನೇಟ್ಸ್‌ಗಳು ಬಿ) ಕಾರ್ಬೋಹೈಡ್ರೇಟ್ಸ್‌ಗಳು ಸಿ) ಹೈಡ್ರೋಕಾರ್ಬನ್ಸ್‌ಗಳು ಡಿ) ಮೇಲಿನ ಯಾವುದೂ ಅಲ್ಲ.

6. ಈ ಕೆಳಗಿನವುಗಳಲ್ಲಿ ಯಾವುದು ಅಡಿಗೆ ಅನಿಲದ ಮಿಶ್ರಣ ಆಗಿರುತ್ತದೆ?
ಎ) ಮಿಥೇನ್ ಮತ್ತು ಇಂಗಾಲದ ಡೈ ಆಕ್ಸೈಡ್ ಬಿ) ಆಮ್ಲಜನಕ ಮತ್ತು ಸಾರಜನಕ
ಸಿ) ಬ್ಯೂಟೇನ್ ಮತ್ತು ಪ್ರೊಪೇನ್ ಡಿ) ಬ್ಯೂಟೇನ್ ಮತ್ತು ಮಿಥೇನ್

7. ಈ ಕೆಳಗಿನ ಯಾವ ಪ್ರಾಣಿಯು ರಕ್ತವಿಲ್ಲದಿದ್ದರೂ ಉಸಿರಾಡುತ್ತದೆ?
ಎ) ಜಿರಲೆ ಬಿ) ಎರೆಹುಳ ಸಿ) ಮೀನು ಡಿ) ಹೈಡ್ರಾ

8 ಕೀಟಗಳು ಈ ವರ್ಗಕ್ಕೆ ಸೇರುತ್ತವೆ.
ಎ) ಮಣ್ಣು ಹುಳುಗಳು ಬಿ) ಸಂಧಿಪದಿಗಳು ಸಿ) ಕಠಿಣ ಚರ್ಮಿಗಳು ಡಿ) ಸೀಲೆಂಟರೇಟ್ಸ್‌ಗಳು

9 ಯಾವ ವಿಜ್ಞಾನಿಯನ್ನು ರಾಷ್ಟ್ರೀಯ ಪ್ರಯೋಗ ಶಾಲೆಗಳ ಸ್ಥಾಪಕ ಎಂದು ನೆನಪಿಸಿಕೊಳ್ಳಲಾಗುತ್ತದೆ?
ಎ) ಸೊಹರಬ್ ಮೋದಿ ಬಿ) ಶಾಂತಿಸ್ವರೂಪ್ ಭಟ್ನಾಗರ್ ಸಿ) ಎಂ.ಎಸ್. ಗೋಲ್‌ವಾಲ್‌ಕರ್ ಡಿ) ಯಾರೂ ಅಲ್ಲ

10 ಪರಿವೇಷದರ್ಶಕದ ಈ ಬಳಕೆ
ಎ) ಅಪಧಮನಿಗಳ ಅಧ್ಯಯನ
ಬಿ) ಸೂರ್ಯನ ಪರಿವೇಷವನ್ನು ವೀಕ್ಷಿಸಲು ಮತ್ತು ಛಾಯಾಗ್ರಹಣ ತೆಗೆಯುವಿಕೆ.
ಸಿ) ಮನುಷ್ಯನ ರಕ್ತದ ಅಧ್ಯಯನ ಡಿ) ಎದೆ ಭಾಗದ ಅಧ್ಯಯನ

11. ರಾಸಾಯನಿಕ ಜೀವ ವಿಕಾಸವನ್ನು ಮಂಡಿಸಿದ ವಿಜ್ಞಾನಿ
ಎ) ಡಾರ್ವಿನ್ ಬಿ) ಲಾಮಾರ್ಕ್ ಸಿ) ಒಪ್ಯಾರಿನ್ ಡಿ) ಹ್ಯಾಕೆಲ್

12. ಹಸಿರು ಎಲೆಯ ಗಿಡವನ್ನು ಕೆಂಪು ದೀಪದ ಕೆಳಗೆ ಇಟ್ಟಾಗ ಈ ಬಣ್ಣದಂತೆ ಕಾಣುತ್ತದೆ.
ಎ) ಕಪ್ಪು ಬಿ) ಹಸಿರು ಸಿ) ಕೆಂಪು ಡಿ) ನೇರಳೆ

13 ಭಾರತದ ವಾತಾವರಣವು
I) ಹಿಮಾಲಯ ಪರ್ವತ ಶ್ರೇಣಿಗಳಿಂದ ಪ್ರಭಾವಿತವಾಗಿದೆ.
II) ಹಿಂದೂ ಮಹಾಸಾಗರದಿಂದ ಪ್ರಭಾವಿತವಾಗಿದೆ
ಈ ಹೇಳಿಕೆಗಳಲ್ಲಿ ಯಾವುದು ಸರಿ?
ಎ) ಎರಡು ಹೇಳಿಕೆಗಳು ಸರಿ ಬಿ) ಎರಡು ಹೇಳಿಕೆಗಳು ಸರಿ ಅಲ್ಲ
ಸಿ) ಅದು ಜ್ಯೋತಿಷ್ಯದ ಆಧಾರದ ಮೇಲೆ ಪ್ರಭಾವಿವಾಗಿದೆ. ಡಿ) ಕೇವಲ ಒಂದು ಸರಿಯಾದ ಹೇಳಿಕೆ

14 ಮಣ್ಣಿನ ಸವಕಳಿಯಲ್ಲಿ ಈ ಕೆಳಕಂಡ ಬಗೆಯ ಪ್ರಕಾರಗಳಿವೆ.
ಎ) ಶೀಟ್ ಸವಕಳಿ ಬಿ) ರಿಲ್ ಸವಕಳಿ ಸಿ) ಗಲ್ಲಿ ಸವಕಳಿ ಡಿ) ಎಲ್ಲವೂ ಸರಿ.

15 ನಿತ್ಯ ಹರಿದ್ವರ್ಣ ಕಾಡುಗಳು ಬೆಳೆಯಲು ಬೇಕಾದ ವಾತಾವರಣದ ಬಗ್ಗೆ. ಇರುವ ವಿಷಯಗಳನ್ನು ಹೊಂದಿಸಿರಿ.
ಎ) ಮಳೆ – 200 ಸೆ.ಮೀ. ಗಿಂತ ಜಾಸ್ತಿ
ಬಿ) ಉಷ್ಣತೆ – 25 ಡಿಗ್ರಿ ಸೆ ರಿಂದ 27 ಡಿಗ್ರಿ ಸೆ.
ಸಿ) ಸರಾಸರಿ ವಾರ್ಷಿಕ – 77% ತೇವಾಂಶ
ಎ) ಕೇವಲ ಎ ಮತ್ತು ಸಿ ಹೊಂದಿಕೆ ಆಗಿದೆ. ಬಿ) ಕೇವಲ ಬಿ ಮತ್ತು ಸಿ ಹೊಂದಿಕೆ ಆಗಿದೆ.
ಸಿ) ಯಾವುದೂ ಹೊಂದಿಕೆ ಆಗಿಲ್ಲ. ಡಿ) ಎಲ್ಲವೂ ಹೊಂದಿಕೆ ಆಗಿದೆ.

16. ಭತ್ತದ ತಳಿ
ಎ) ರತ್ನ ಬಿ) ಜಯ ಸಿ) ಐ ಆರ್–20 ಡಿ) ಎಲ್ಲವೂ ಭತ್ತದ ತಳಿಗಳು

17 ಸಂವಿಧಾನದ ಮೂರನೇ ಭಾಗದ ಈ ಕೆಳಕಂಡ ಯಾವುದರ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯದ ನೆರವು ಪಡೆಯಬಹುದು?
ಎ) ಮೂಲಭೂತ ಹಕ್ಕುಗಳು ಬಿ) ಕಾನೂನಿನ ಹಕ್ಕು ಸಿ) ಸಂವಿಧಾನದ ಹಕ್ಕು ಡಿ) ಶಾಸನಬದ್ಧಹಕ್ಕು

18 ಯಾರ ವಿರುದ್ಧ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ?
ಎ) ರಾಜ್ಯಗಳು ಬಿ) ಮುನ್ಸಿಪಾಲಿಟಿಗಳು ಸಿ) ಖಾಸಗಿ ವ್ಯಕ್ತಿಗಳು ಡಿ) ಜಿಲ್ಲಾ ಬೋರ್ಡ್‌ಗಳು

---

1) ಎ 2) ಸಿ 3) ಸಿ 4) ಎ 5) ಸಿ 6) ಸಿ 7) ಡಿ 8) ಬಿ 9) ಬಿ
10) ಬಿ 11) ಸಿ 12) ಎ 13) ಎ 14) ಡಿ 15) ಡಿ 16) ಡಿ 17) ಎ 18) ಸಿ

UJWALA ACADEMY
# 784, Srishti School of Business Building,
Outer Ring Road, Hosakerehalli Cross



www.kpscvaani.com

Scanned by CamScanner

19 ಅಧೀನ ನ್ಯಾಯಾಲಯಗಳು ನಿರ್ದಿಷ್ಟ ವಿಷಯಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಮೀರಿದಾಗ ವ್ಯವಹರಣೆಯನ್ನು ಮುಂದುವರಿಸದಂತೆ ಉಚ್ಛ ನ್ಯಾಯಾಲಯವು ಆದೇಶಿಸುವ ರಿಟ್‌ನ ಹೆಸರು.
ಎ) ಹೇಬಿಯಸ್ ಕಾರ್ಪಸ್ ಬಿ) ಮ್ಯಾಂಡಮಸ್ ಸಿ) ಸರ್ಶಿಯರರಿ ಡಿ) ಪ್ರೊಹಿಬಿಷನ್

20. ಸಂವಿಧಾನ ಮೂಲ ರಚನೆಯನ್ನು ಸಂಸತ್ತು ತಿದ್ದುಪಡಿ ಮಾಡುವ ಅಧಿಕಾರ ಹೊಂದಿಲ್ಲ ಎಂದು ಸರ್ವೋಚ್ಛ ನ್ಯಾಯಾಲಯವು ಆದೇಶಿಸಿದ್ದು ಈ ಕೆಳಕಂಡ ಯಾವ ಪ್ರಕರಣದಲ್ಲಿ
ಎ) ಮಿನರ್ವ್ ಮಿಲ್ ಪ್ರಕರಣ
ಬಿ) ಕೇಶವಾನಂದ ಭಾರತಿ V/s ಸ್ಟೇಟ್ ಆಫ್ ಕೇರಳ
ಸಿ) ಗೋಲಕನಾಥ್ V/s ಸ್ಟೇಟ್ ಆಫ್ ಪಂಜಾಬ್
ಡಿ) ಶಂಕರಿಪ್ರಸಾದ್ V/s ಯೂನಿಯನ್ ಆಫ್ ಇಂಡಿಯಾ.

21 ಮ್ಯಾಕ್ ಮೋಹನ್ ರೇಖೆ – ಇದು ಚೀನಾ ಮತ್ತು ಭಾರತದ ಮೇರೆಯನ್ನು ಗುರುತಿಸುವ ರೇಖೆ ಇದನ್ನು ಸರ್ ಹೆನ್ರಿ ಮ್ಯಾಕ್ ಮೋಹನ್ ಎಂಬುವವರು ಗುರುತಿಸಿದರು. ಚೀನಾ ದೇಶವು ಇದಕ್ಕೆ ಮಾನ್ಯತೆ ನೀಡಿಲ್ಲ.
ಎ) ಸರಿ
ಬಿ) ತಪ್ಪು
ಸಿ) ಇದು ಬಡತನ ಗುರುತಿಸುವ ರೇಖೆ
ಡಿ) ಇದು ಲಂಡನ್ ಒಲಿಂಪಿಕ್‌ನಲ್ಲಿರುವ ಮುಕ್ತಾಯದ ರೇಖೆ

22. "ಇಸ್ತಾನ್ ಬುಲ್" ಇದರ ಮೊದಲ ಹೆಸರು
ಎ) ಕಾನ್‌ಸ್ಟಾಂಟಿನೋಪಲ್ ಬೈಝಾಂಟಿಯಂ
ಬಿ) ತುರ್ಕಿಸ್ತಾನ
ಸಿ) ಮೊಯರ್
ಡಿ) ದೊಡ್ಡ ತುರ್ಕಿ

23 ಅತಿ ದೊಡ್ಡ ರಾಷ್ಟ್ರ
ಎ) ರಷ್ಯ ಬಿ) ಕೆನಡಾ ಸಿ) ಚೀನಾ ಡಿ) ಯು.ಎಸ್.ಎ.

24 "ಕೊಸವೊ" ದೇಶದ ರಾಜಧಾನಿ
ಎ) ಬೆಲ್‌ಗ್ರೇಡ್ ಬಿ) ತಿರಾನಾ ಸಿ) ಸ್ಕೋಪಿಯ ಡಿ) ಪ್ರಿಸ್ಟಿನಾ

25 ಹೂವಿನ ಬಣ್ಣಕ್ಕೆ ಕಾರಣ
ಎ) ಪತ್ರ ಹರಿತ್ತು ಬಿ) ಅಂತೋಸ್ಯೆಯಾನಿನ್ಸ್ ಸಿ) ಫೈಟೋಕ್ರೋಮ್ಸ್ ಡಿ) ಮೆಲಾನಿನ್

26 ವಂಶವಾಹಿನಿಯು
ಎ) ನಿದ್ರಾಪ್ರಚೋದಕ ಔಷಧ
ಬಿ) ಅನುವಂಶೀಯತೆ ಭಾಗ
ಸಿ) ಜೀವಸತ್ವದ ಒಂದು ವಿಧ
ಡಿ) ದೇಹದ ಒಂದು ರೀತಿಯ ಜೀವಕೋಶ

27 ಕಾನೂನಿನ ಮುಂದೆ ಸಮಾನರು ಎಂಬ ಪರಿಕಲ್ಪನೆಯ ನಡಾವಳಿ ಮುಂದಿಟ್ಟವರು.
ಎ) ಕ್ಯಾಬಿನೆಟ್ ಮಿಷನ್ ಬಿ) ಸೈಮನ್ ಕಮಿಷನ್ ಸಿ) ಸ್ವರಾಜ್ ಬಿಲ್ ಡಿ) ಯಾವುದೂ ಅಲ್ಲ.

28 ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಿದ ಸಂವಿಧಾನದ ವಿಧಿ
ಎ) 15 ಬಿ) 16 ಸಿ) 17 ಡಿ) 18

29 ಈ ಕೆಳಕಂಡವುಗಳಲ್ಲಿ ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಲ್ಲದ ವಿಷಯ
ಎ) ಬ್ರಿಟಿಷರ ಅಡಿಯಲ್ಲಿ ಒಂದಾದ ಭಾರತ
ಬಿ) ಪಾಶ್ಚಿಮಾತ್ಯ ಶಿಕ್ಷಣ ಮತ್ತು ವಿಚಾರಧಾರೆ
ಸಿ) ಭಾರತದ ಸಂಸತ್ತಿನ ಲೂಟಿ
ಡಿ) ಇವು ಯಾವುವೂ ಅಲ್ಲ

30 ಭಾರತದಲ್ಲಿ 1837ರಲ್ಲಿ ಆರಂಭವಾದ ಸಾರ್ವಜನಿಕ ಸಂಘಟನೆ
ಎ) ಬೆಂಗಾಲಿ ಬ್ರಿಟಿಷ್ ಇಂಡಿಯನ್ ಸೊಸೈಟಿ
ಬಿ) ಬ್ರಿಟಿಷ್ ಇಂಡಿಯಾ ಅಸೋಸಿಯೇಶನ್
ಸಿ) ಲ್ಯಾಂಡ್ ಹೋಲ್ಡರ್ಸ್ ಸೊಸೈಟಿ
ಡಿ) ಮದ್ರಾಸ್ ನೇಟಿವ್ ಅಸೋಸಿಯೇಶನ್

31 ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ವರ್ಷ
ಎ) 1867 ಬಿ) 1885 ಸಿ) 1887 ಡಿ) 1920

32 ಭಾರತೀಯ ಕಾಂಗ್ರೆಸ್ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದವರು
ಎ) ಎ.ಓ.ಹ್ಯೂಂ
ಬಿ) ಗೋಪಾಲ ಕೃಷ್ಣ ಗೋಖಲೆ
ಸಿ) ಸುರೇಂದ್ರನಾಥ ಬ್ಯಾನರ್ಜಿ
ಡಿ) ಖಾನ್ ಅಬ್ದುಲ್ ಗಫರ್ ಖಾನ್

33 ಕಾರಂಜಾ ಅಣೆಕಟ್ಟು ಇರುವ ಜಿಲ್ಲೆ.
ಎ) ಬೀದರ್ ಬಿ) ಬಿಜಾಪುರ ಸಿ) ಬೆಳಗಾಂ ಡಿ) ಗುಲ್ಬರ್ಗಾ

34 ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಶೋಧನೆ ಸಂಸ್ಥೆ (CFTRI) ಇರುವ ನಗರ
ಎ) ಮುಂಬಯಿ ಬಿ) ಅಹಮದಾಬಾದ್ ಸಿ) ಮೈಸೂರು ಡಿ) ಬೆಂಗಳೂರು

35 ಕೃಷ್ಣ ನದಿಯು ಈ ಕೆಳಕಂಡ ಜಿಲ್ಲೆಯಲ್ಲಿ ಹರಿಯುವುದಿಲ್ಲ
ಎ) ಬೆಳಗಾಂ ಬಿ) ಬಿಜಾಪುರ ಸಿ) ಧಾರವಾಡ ಡಿ) ರಾಯಚೂರು

36 ಕರ್ನಾಟಕದ ಈ ಕೆಳಕಂಡ ಸ್ಥಳದಲ್ಲಿ ನವಿಲುಗಳ ಅಭಯಧಾಮ ಇರುತ್ತದೆ.
ಎ) ಸೋಮೇಶ್ವರ ಬಿ) ಆದಿಚುಂಚನಗಿರಿ ಸಿ) ದಾಂಡೇಲಿ ಡಿ) ಶೆಟ್ಟಿಹಳ್ಳಿ

37 ಹೋಮ್ ರೂಲ್ ಚಳವಳಿ ತಳೆದ ನಿಲುವು
ಎ) ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ
ಬಿ) ಎಲ್ಲಾ ವಯಸ್ಕರಿಗೆ ಮತದಾನದ ಹಕ್ಕು
ಸಿ) ಭಾರತದ ಸ್ವ ಆಡಳಿತ ಸರ್ಕಾರ
ಡಿ) ಈ ಮೇಲಿನವುಗಳಲ್ಲಿ ಯಾವುವೂ ಅಲ್ಲ.

38 ಚಂಪಾರಣ್ ಗಾಂಧೀಜಿಯವರು ಆರಂಭಿಸಿದ ಚಳವಳಿಗೆ ಕಾರಣ
ಎ) ಹರಿಜನರ ಸುರಕ್ಷತೆ
ಬಿ) ಸಿವಿಲ್ ಡಿಸ್‌ಒಬಿಡಿಯನ್ಸ್ ಚಳವಳಿ
ಸಿ) ಹಿಂದೂಗಳಲ್ಲಿ ಐಕ್ಯತೆಯನ್ನು ಕಾಪಾಡುವುದಕ್ಕಾಗಿ
ಡಿ) ಇಂಡಿಗೂ ಕೆಲಸಗಾರರ ಸಮಸ್ಯಗಳನ್ನು ಬಗೆಹರಿಸುವುದಕ್ಕಾಗಿ

39 1920 ರಲ್ಲಿ ಕೆಳಕಂಡ ಯಾವ ನಗರದಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಅನ್ನು ಸ್ಥಾಪಿಸಲಾಯಿತು.
ಎ) ಬಾಂಬೆ ಬಿ) ಕಲ್ಕತ್ತಾ ಸಿ) ದೆಹಲಿ ಡಿ) ಕಾನ್ಪುರ್

| | | | | | | | | |
|---|---|---|---|---|---|---|---|---|
| 19) ಸಿ | 20) ಬಿ | 21) ಎ | 22) ಎ | 23) ಎ | 24) ಡಿ | 25) ಸಿ | 26) ಬಿ | 27) ಸಿ |
| 28) ಸಿ | 29) ಡಿ | 30) ಸಿ | 31) ಬಿ | 32) ಎ | 33) ಎ | 34) ಸಿ | 35) ಸಿ | 36) ಬಿ |
| 37) ಸಿ | 38) ಡಿ | 39) ಎ | | | | | | |



www.kpscvaani.com
Scanned by CamScanner

40 ಮಾರ್ಚ್ 12, 1930 ರಂದು ಆರಂಭವಾದ ದಂಡಿ ಪಾದಯಾತ್ರೆಗೆ ಇದ್ದ ಅಂದಿನ ಗುರಿ ಯಾವುದು?
ಎ) ಜನರು ಸಭೆ ಸೇರುವುದರ ಬಗ್ಗೆ ಸ್ಥಳೀಯ ನ್ಯಾಯ ದಂಡಾಧಿಕಾರಿಯು ನೀಡಿದ್ದ ನಿಷೇದಾಜ್ಞೆಯನ್ನು ಉಲ್ಲಂಘಿಸುವುದು.
ಬಿ) ಸ್ವಾತಂತ್ರ್ಯ ಬೆಳವಣಿಗೆ ಹೊಸ ಉತ್ಸಾಹ ತುಂಬಲು
ಸಿ) ಸಮುದ್ರ ದಡದಲ್ಲಿ ಉಪ್ಪನ್ನು ತಯಾರಿಸಿ ಉಪ್ಪಿನ ಕಾನೂನನ್ನು ಮುರಿಯುವುದು.
ಡಿ) ಕಾಂಗ್ರೆಸಿಗೆ ಜನಬೆಂಬಲವಿದೆಯೆಂದು ತೋರಿಸುವುದಕ್ಕಾಗಿ.

41 ಸಂವಿಧಾನ ಪುನರ್ ವಿಮರ್ಶನಾ ಸಮಿತಿ ಅಧ್ಯಕ್ಷರಾಗಿದ್ದವರು.
ಎ) ನ್ಯಾ. ಎಂ.ಎನ್. ವೆಂಕಟಾಚಲಯ್ಯ
ಬಿ) ನ್ಯಾ.ಬಾಲಕೃಷ್ಣನ್
ಸಿ) ನ್ಯಾ. ಕಪಾಡಿಯಾ
ಡಿ) ನ್ಯಾ. ಶ್ರೀಕೃಷ್ಣ

42 "ಕಾನೂನಿನ ಎದುರು ಸಮಾನತೆ" ಅನುಚ್ಛೇದ 14 ಖಾತರಿಪಡಿಸಿರುವುದು.
ಎ) ಎಲ್ಲಾ ವ್ಯಕ್ತಿಗಳಿಗೆ
ಬಿ) ಭಾರತೀಯ ಪ್ರಜೆಗಳಿಗೆ
ಸಿ) ಭಾರತದಲ್ಲಿ ವಾಸಿಸುವ ವ್ಯಕ್ತಿಗಳಿಗೆ
ಡಿ) ಭಾರತದಲ್ಲಿ ಜನಿಸಿರುವ ವ್ಯಕ್ತಿಗಳಿಗೆ

43 ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಗಳ ಇರುವ ಸ್ಥಳ
ಎ) ಹಾನಗಲ್ ಬಿ) ಗದಗ್ ಸಿ) ಧಾರವಾಡ ಡಿ) ಮೈಸೂರು

44 ನಾಗರಿಕರಿಗೆ ಕಾಲಮಿತಿಯೊಳಗೆ ಸರ್ಕಾರದ ಸೇವೆಗಳು ದೊರೆಯುವಂತೆ ಮಾಡಿದ ಕರ್ನಾಟಕ ಸರ್ಕಾರದ ಇತ್ತೀಚಿನ ಯೋಜನೆ (2012 ರಲ್ಲಿ ಈ ಪರೀಕ್ಷೆ ನಡೆದಾಗ
ಎ) ಸಾಂತ್ವನ ಬಿ) ಸಕಾಲ ಸಿ) ಬೆಳಕು ಡಿ) ಚೈತನ್ಯ

45 ಎರಡು ಕಾರುಗಳು ರಸ್ತೆ ಬದಿಯ ಚಹಾದ ಅಂಗಡಿಯನ್ನು ಬೆಳಗ್ಗೆ 1 PMಗೆ ಬಿಡುತ್ತದೆ. ಒಂದು ಕಾರು ಪೂರ್ವ ದಿಕ್ಕಿನಲ್ಲಿ ಗಂಟೆಗೆ 60 ಕಿ.ಮೀ.ವೇಗದಲ್ಲಿ, ಇನನೊಂದು ಕಾರು, ಪಶ್ಚಿಮ ದಿಕ್ಕಿನಲ್ಲಿ ಗಂಟೆಗೆ 40 ಕಿ.ಮೀ. ವೇಗದಲ್ಲಿ ಒಂದೇ ನೇರವಾದ ಹೆದ್ದಾರಿಯಲ್ಲಿ ಚಲಿಸಿದರೆ ಎಷ್ಟು ಗಂಟೆಗೆ ಅವು ಪರಸ್ಪರ 350 ಕಿ.ಮೀ. ದೂರದಲ್ಲಿರುತ್ತದೆ ?
ಎ) 4.30 PM ಬಿ) 2.30 PM ಸಿ) 3.30 PM ಡಿ) 5.30 PM

46 ಈ ಕೆಳಗಿನ ಕ್ರಮದ ಪ್ರಕಾರ ಮುಂದೆ ಬರಬೇಕಾದ ಸಂಖ್ಯೆ ಯಾವುದು.
2, 5, 8, 11, 14
ಎ) 18 ಬಿ) 17 ಸಿ) 19 ಡಿ) 16

47 ವ್ಯಾಪಾರಿಯೊಬ್ಬನು ಐದು ಸಾವಿರ ರೂಪಾಯಿಯನ್ನು ಪ್ರತಿ ಸಾರಿಯಂತೆ, 1960,1965 ಮತ್ತು 1970 ರಲ್ಲಿ ವ್ಯಾಪಾರದಲ್ಲಿ ತೊಡಗಿಸುತ್ತಾನೆ. ಆತನ ಹಣವು ಪ್ರತಿ ಐದು ವರುಷಕ್ಕೊಮ್ಮೆ ದ್ವಿಗುಣಗೊಳ್ಳುತ್ತದೆ. ಆತನು ತನ್ನ ಈ ಉದ್ಯೋಗವನ್ನು 1960 ರಲ್ಲಿ ಐದು ಸಾವಿರ ರೂಪಾಯಿಯಿಂದ ಆರಂಭಗೊಳಿಸಿದ್ದರೆ ಆ ಹಣವು 1980 ರಲ್ಲಿ ಎಷ್ಟಾಗಿರುತ್ತದೆ.
ಎ) ರೂ. 70,000 ಬಿ) ರೂ. 1,40,000 ಸಿ) ರೂ. 2,40,000 ಡಿ) ರೂ. 2,80,000

48 ತುಂಬಾ ದಣಿದ ಪೋಲೀಸ್ ಅಧಿಕಾರಿಯೊಬ್ಬನು ಒಂದು ರಾತ್ರಿ ಗಂಟೆ 10ಕ್ಕೆ ಮಲಗುವ ಮುನ್ನ ತಮ್ಮ ಅಲಾರಾಂ ಗಡಿಯಾರವನ್ನು ಮರುದಿನದ ಹನ್ನೆರಡು ಗಂಟೆಗೆ ಸೆಟ್ ಮಾಡಿ ಮಲಗಿದರು. ಅವರಿಗೆ ಅಲಾರಾಂದಿಂದ ಎಚ್ಚರವಾದಾಗ ಅಪರ ಒಟ್ಟು ಎಷ್ಟು ಗಂಟೆ ನಿದ್ರಿಸಿದ್ದರು?
ಎ) 14 ಬಿ) 12 ಸಿ) 11 ಡಿ) 2

49 ಈ ಕೆಳಕಂಡ ರಾಜ್ಯಗಳಲ್ಲಿ ಯಾವುದು ಪಾಕ್ಸಿಸ್ತಾನದೊಂದಿಗೆ ಗಡಿರೇಖೆಯನ್ನು ಹೊಂದಿದೆ?
ಎ) ಗುಜರಾತ್ ಬಿ) ರಾಜಸ್ತಾನ್ ಸಿ) ಪಂಜಾಬ್ ಡಿ) ಎಲ್ಲವೂ ಹೊಂದಿವೆ.

50 ಅರಾವಳಿ ಬೆಟ್ಟಗಳ ಸಾಲುಗಳಲ್ಲಿ ಅತಿ ಎತ್ತರದ ಬೆಟ್ಟ ಯಾವುದು?
ಎ) ವಾವುಲ ಮಾಲ ಬಿ) ಅಬುಬೆಟ್ಟ ಸಿ) ಗುರು ಶಿಖರ ಡಿ) ಇವುಗಳಲ್ಲಿ ಯಾವುದೂ ಅಲ್ಲ

51 ಇವುಗಳಲ್ಲಿ ಯಾವುದು ಗಂಗಾನದಿಯ ಉಪನದಿಯಲ್ಲ?
ಎ) ರಾಮಗಂಗಾ
ಬಿ) ಸೋನ್
ಸಿ) ತೋನ್ಸ್
ಡಿ) ಎಲ್ಲವೂ ಗಂಗಾನದಿಯ ಉಪನದಿಗಳು

52 ಇವನ್ನು ಹೊಂದಿಸಿರಿ ಭಾರತದ ಪ್ರಮುಖ ಉದ್ದನೆಯ ನದಿಗಳು

| | ನದಿ | ಉದ್ದ (ಕಿ.ಮೀ) | | ನದಿ | ಉದ್ದ (ಕಿ.ಮೀ) |
|---|---|---|---|---|---|
| ಎ) | ಸಿಂಧು | 2,880 | ಬಿ) | ಗಂಗಾ | 2,525 |
| ಸಿ) | ಕಾವೇರಿ | 800 | ಡಿ) | ಕೃಷ್ಣ | 1,400 |
| ಇ) | ಗೋದಾವರಿ | 857 | ಎಫ್) | ಮಹಾನದಿ | 1,300 |
| ಜಿ) | ತಾಪಿ | 724 | ಹೆಚ್) | ನರ್ಮದ | 1,300 |

ಎ) ಕೇವಲ ಎ.ಬಿ.ಸಿ. ಮತ್ತು ಡಿ ಸರಿಯಾಗಿ ಹೊಂದಿವೆ.
ಬಿ) ಕೇವಲ ಇ.ಎಫ್ ಜಿ ಮತ್ತು ಹೆಚ್. ಸರಿಯಾಗಿ ಹೊಂದಿವೆ.
ಸಿ) ಎಲ್ಲವನ್ನು ಸರಿಯಾಗಿ ಹೊಂದಿಸಲಾಗಿದೆ.
ಡಿ) ಈ ಯಾವುದನ್ನೂ ಸರಿಯಾಗಿ ಹೊಂದಿಸಿಲ್ಲ.

53 ಬಂಧನಕ್ಕೆ ಒಳಗಾದ ವ್ಯಕ್ತಿಯನ್ನು ಎಷ್ಟು ಗಂಟೆಯ ಒಳಗೆ ನ್ಯಾಯಾಧೀಶರ ಮುಂದೆ ಹಾಜರು ಪಡಿಸಬೇಕು?
ಎ) 48 ಬಿ) 24 ಸಿ) ಒಂದು ವಾರ ಡಿ) ಆರು ವಾರ

54 ಅನುಚ್ಛೇದ 30 ರಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿರುವುದು.
ಎ) ಧಾರ್ಮಿಕ ಅಲ್ಪಸಂಖ್ಯಾತರಿಗೆ
ಬಿ) ಭಾಷಾ ಅಲ್ಪಸಂಖ್ಯಾತರಿಗೆ
ಸಿ) ನಾಗರಿಕರಿಗೆ
ಡಿ) ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ

55 ಹೇಬಿಯಸ್ ಕಾರ್ಪಸ್ ರಿಟ್ ಎಂದರೆ
ಎ) ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವುದು.
ಬಿ) ನಾವು ಆಜ್ಞೆ ಮಾಡುವುದು.
ಸಿ) ಸ್ವಾಭಾವಿಕ
ಡಿ) ಅನೂರ್ಜಿತ ಆದೇಶ

56 ಮ್ಯಾಂಡಮಸ್ ರಿಟ್ ಹೊರಡಿಸುವುದು ಈ ಕೆಳಕಂಡ ಕಾರಣದಿಂದ
ಎ) ಕಾನೂನು ಬಾಹಿರ ಬಂಧನ
ಬಿ) ಸಾರ್ವಜನಿಕ ಕಛೇರಿಯಲ್ಲಿ ಕಾನೂನುಬಾಹಿರ ವ್ಯಕ್ತಿ ನಡೆಸುವುದು.
ಸಿ) ಸಾರ್ವಜನಿಕ ಸೇವೆಗಳ ಕರ್ತವ್ಯ ನಿರ್ವಹಿಸದೇ ಇರುವುದು
ಡಿ) ಯಾವುದೂ ಇಲ್ಲ.

---

40) ಸಿ 41) ಎ 42) ಎ 43) ಡಿ 44) ಬಿ 45) ಎ 46) ಬಿ 47) ಬಿ 48) ಡಿ
49) ಡಿ 50) ಸಿ 51) ಡಿ 52) ಸಿ 53) ಬಿ 54) ಡಿ 55) ಎ 56) ಸಿ 57) ಎ



www.kpscvaani.com
Scanned by CamScanner

57 ಕಬ್ಬು ಬೆಳೆಯುವ ಕರ್ನಾಟಕದ ಪ್ರದೇಶಗಳು
ಎ) ಬೆಳಗಾವಿ, ಮಂಡ್ಯ, ಮುನೀರಾಬಾದ್, ಬಿಜಾಪುರ, ಬಾಗಲಕೋಟೆ
ಬಿ) ಬೆಳಗಾವಿ, ಮಂಡ್ಯ, ಗುಲ್ಬರ್ಗಾ, ಬಿಜಾಪುರ, ಕೊಡಗು
ಸಿ) ಬೆಳಗಾವಿ, ಕಾರವಾರ, ಮುನೀರಾಬಾದ್, ಬಿಜಾಪುರ, ಬಾಗಲಕೋಟೆ
ಡಿ) ಮಂಗಳೂರು, ಮಂಡ್ಯ, ಮುನೀರಾಬಾದ್, ಬಿಜಾಪುರ, ಕಾರವಾರ.

58 ವಿಮಾನ ನಿಲ್ದಾಣಗಳನ್ನು ಅವುಗಳ ಹೆಸರುಗಳೊಂದಿಗೆ ಹೊಂದಿಸಿರಿ

| | ವಿಮಾನನಿಲ್ದಾಣ | ಹೆಸರು |
|---|---|---|
| I) | ಮುಂಬೈ | ಛತ್ರಪತಿ ಶಿವಾಜಿ ವಿಮಾನ ನಿಲ್ದಾಣ |
| II) | ಕೊಲ್ಕತ್ತಾ | ಡಂ ಡಂ ಸುಭಾಷ್ ಚಂದ್ರಬೋಸ್ ವಿಮಾನ ನಿಲ್ದಾಣ |
| III) | ನವದೆಹಲಿ | ಪಾಲಂ–ಇಂದಿರಾಗಾಂಧಿ ವಿಮಾನ ನಿಲ್ದಾಣ |
| IV) | ಚೆನ್ನೈ | ಮೀನಂಬಾಕಂ ವಿಮಾನ ನಿಲ್ದಾಣ |

ಎ) ಎಲ್ಲವೂ ಸರಿಯಾಗಿ ಹೊಂದಿಕೆಯಾಗಿದೆ. ಬಿ) ಕೇವಲ I, II ಮತ್ತು III ಸರಿಯಾಗಿ ಹೊಂದಿಕೆಯಾಗಿದೆ.
ಸಿ) ಕೇವಲ II ಮತ್ತು III ಸರಿಯಾಗಿ ಹೊಂದಿಕೆಯಾಗಿವೆ. ಡಿ) ಯಾವುದೂ ಸರಿಯಾಗಿ ಹೊಂದಿಕೆಯಾಗಿಲ್ಲ.

59 ಈ ಕೆಳಕಾಣುವ ಯಾವ ಹೇಳಿಕೆ ಸರಿ?
ಎ) ಗೊಂದಲಿಗ ಎಂಬುದು ಕರ್ನಾಟಕದಲ್ಲಿ ಕಂಡು ಬರುವ ಒಂದು ಬುಡಕಟ್ಟು.
ಬಿ) ಗೊಂದಲಿಗಎಂಬುದು ರಾಯಚೂರಿನಲ್ಲಿರುವ ಒಂದು ವಿವಾದಿತ ವಿದ್ಯುತ್ ಉತ್ಪಾದನಾ ಕೇಂದ್ರ
ಸಿ) ಗೊಂದಲಿಗ ಉಂಬುದು ತೆಂಗಿನ ಗಿಡಗಳಿಗೆ ದಾಳಿ ಇಡುವ ಕೀಟ
ಡಿ) ಗೊಂದಲಿಗ ಎಂಬುದು ದಂಡುಪಾಳ್ಯ ಗ್ಯಾಂಗಿನ ಸದಸ್ಯನೊಬ್ಬನ ಹೆಸರು.

60 ಈ ಕೆಳಕಂಡವುಗಳಲ್ಲಿ ಸರಿಯಾದದ್ದು ಯಾವುದು?

| | | |
|---|---|---|
| 1) | ಮರ್ಮಗೋವಾ ಬಂದರು | 1961ರಲ್ಲಿ ಆರಂಭವಾಯಿತು. |
| 2) | ಪಾರದೀಪ್ ಬಂದರು | 1966ರಲ್ಲಿ ಆರಂಭವಾಯಿತು. |
| 3) | ನವ ಮಂಗಳೂರು ಬಂದರು | 1974ರಲ್ಲಿ ಆರಂಭವಾಯಿತು. |

ಎ) ಎಲ್ಲವೂ ಸರಿ ಬಿ) ಕೇವಲ 1 ಮತ್ತು 2 ಸರಿ ಸಿ) ಕೇವಲ 2 ಮತ್ತು 3 ಸರಿ ಡಿ) ಯಾವುದು ಸರಿಯಲ್ಲ

61 ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಸಂವಿಧಾನವು ವಿಶೇಷ ಅಧಿಕಾರ ನೀಡಿರುವುದು.
ಎ) ರಾಷ್ಟ್ರಪತಿ ಬಿ) ಸಂಸತ್ತು ಸಿ) ಸರ್ವೋಚ್ಛ ನ್ಯಾಯಾಲಯ ಡಿ) ಮೇಲಿನ ಎಲ್ಲವೂ

62 ಈ ಕೆಳಕಂಡವುಗಳಲ್ಲಿ ಯಾವುದು ಮೂಲಭೂತ ಹಕ್ಕು ಅಲ್ಲ?
ಎ) ಸಮಾನತೆಯ ಹಕ್ಕು ಬಿ) ಸಂಸ್ಕೃತಿ ಮತ್ತು ಶಿಕ್ಷಣದ ಹಕ್ಕು
ಸಿ) ಸ್ವತ್ತಿನ ಹಕ್ಕು ಡಿ) ಸ್ವಾತಂತ್ರ್ಯ ಹಕ್ಕು

63 ಸಂವಿಧಾನದ ಪರಿಹಾರೋಪಾಯಗಳು
ಎ) ಸಂವಿಧಾನಾತ್ಮಕ ಹಕ್ಕುಗಳು ಬಿ) ಕಾನೂನು ಹಕ್ಕುಗಳು ಸಿ) ಸ್ವಾಭಾವಿಕ ಹಕ್ಕುಗಳು ಡಿ) ಮೂಲಭೂತ ಹಕ್ಕುಗಳು

64 ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಈ ಕಂಡ ಯಾರ ಮುಂದೆ ಪ್ರಸ್ತುತಪಡಿಸುಹುದು?
ಎ) ಉಚ್ಚ ನ್ಯಾಯಾಲಯದಲ್ಲಿ ಮಾತ್ರ ಬಿ) ಸರ್ವೋಚ್ಚ ನ್ಯಾಯಾಲಯದಲ್ಲಿ ಮಾತ್ರ
ಸಿ) ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳೆರಡರಲ್ಲೂ ಡಿ) ಭಾರತದ ಭೌಗೋಳಿಕ ವ್ಯಾಪ್ತಿಯ ಎಲ್ಲಾ ನ್ಯಾಯಾಲಯಗಳಲ್ಲಿ

65 ಭಾರತದಲ್ಲಿ ನಡೆದ ಸ್ವಾತಂತ್ರ್ಯಕ್ಕಾಗಿನ ಹೋರಾಟವು ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವ ಎಂಬ ಕೂಗಿನಿಂದ ತುಂಬಾ ಪ್ರಭಾವಿತವಾಗಿತ್ತು. ಈ ಪ್ರಭಾವವು ಈ ಕೆಳಕಂಡವುಗಳಲ್ಲಿ ಯಾವುದರಿಂದ ಪಡೆಯಲಾಗಿತ್ತು?
ಎ) ಅಮೇರಿಕಾದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಯುದ್ಧ ಬಿ) ಫ್ರಾನ್ಸ್‌ನ ಕ್ರಾಂತಿ
ಸಿ) ರಷ್ಯಾದ ಕ್ರಾಂತಿ ಡಿ) ಮ್ಯಾಗ್ನಾ ಕಾರ್ಟಾ

66 1857ರ ಸಿಪಾಯಿದಂಗೆ ನಡೆದಾಗ ಭಾರತ ದೇಶದ ಗವರ್ನರ್ ಜನರಲ್ ಆಗಿದ್ದವರು ಯಾರು?
ಎ) ಡಾಲ್‌ಹೌಸಿ ಬಿ) ಕ್ಯಾನಿಂಗ್ ಸಿ) ಲಾರೆನ್ಸ್ ಡಿ) ಕರ್ಜನ್

67 ರಾಜಾರಾಮ್ ಮೋಹನ್ ರಾಯ್‌ರವರು ಹುಟ್ಟುಹಾಕಿದ ಸಂಪ್ರದಾಯವನ್ನು ಮುಂದುವರೆಸಿದ ಬೆಂಗಾಲಿನ ವಿಚಾರವಾದಿಗಳನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು?
ಎ) ಮೋಹಾನ್ಯೈಟ್ಸ್ ಬಿ) ದರೋಜಿಯನ್ನರು
ಸಿ) ಕೆಂಪು ಅಂಗಿಗಳ ಡಿ) ವಿಚಾರವಾದಿ ಮಾನವೀಯತೆಯುಳ್ಳವರು.

68 1857ರ ಸಿಪಾಯಿ ದಂಗೆಯು ಎಲ್ಲಿಂದ ಆರಂಭವಾಯಿತು?
ಎ) ದೆಹಲಿ ಬಿ) ಬಾರಕ್‌ಪುರ ಸಿ) ಮೀರತ್ ಡಿ) ಕಾನ್‌ಪುರ

69 17ನೇ ರಾಷ್ಟ್ರೀಯ ಯುವಜನೋತ್ಸವವು ಈ ಕೆಳಕಂಡ ನಗರದಲ್ಲಿ ನಡೆದಿರುತ್ತದೆ.
ಎ) ದೆಹಲಿ ಬಿ) ಹೈದರಾಬಾದ್ ಸಿ) ಬೆಂಗಳೂರು ಡಿ) ಮಂಗಳೂರು.

70 ಭಾರತದ 63ನೇ ಗಣರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿದ್ದವರು.
ಎ) ಯಂಗ್‌ಲಕ್ ಶಿನಿವಾತ್ರ, ಥೈಲ್ಯಾಂಡ್‌ನ ಪ್ರಧಾನ ಮಂತ್ರಿ ಬಿ) ಶೇಕ್ ಹಸೀನ ವಜೇದ್ ಬಾಂಗ್ಲಾದೇಶದ ಪ್ರಧಾನ ಮಂತ್ರಿ
ಸಿ) ಹಿಲೇರಿ ಕ್ಲಿಂಟನ್ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಡಿ) ಆಂಗ್‌ಸಾನ್ ಸೂಕಿ ಮೈನ್‌ಮಾರ್.

71 ಪುಲಿಟ್ಜರ್ ಪ್ರಶಸ್ತಿಯು ಇದಕ್ಕೆ ಸಂಬಂಧಿಸಿದೆ.
ಎ) ಕ್ರೀಡೆಗಳು ಬಿ) ವಿಜ್ಞಾನ ಸಿ) ಸಂಗೀತ ಡಿ) ಪತ್ರಿಕೋದ್ಯಮ

---

57) ಎ 58) ಎ 59) ಎ 60) ಎ 61) ಸಿ 62) ಸಿ 63) ಡಿ 64) ಸಿ 65) ಬಿ
66) ಬಿ 67) ಬಿ 68) ಸಿ 69) ಡಿ 70) ಎ 71) ಡಿ



www.kpscvaani.com
Scanned by CamScanner

72 ಎಲ್.ಸಿ.ಡಿ. ಎಂದರೆ
ಎ) ಲಿಕ್ವಿಡ್ ಕ್ರಿಸ್ಟಲ್ ಡಿಸ್ಪ್ಲೇ
ಬಿ) ಲೈಟ್ ಕಾಂಪ್ಯಾಕ್ಟ್ ಡಿಸ್ಪ್ಲೇ
ಸಿ) ಲೈಸರ್‌ಜಿಕ್ ಕಾಂಪ್ಯಾಕ್ಟ್ ಡೈಯೋಡ್
ಡಿ) ಲಾಂಗ್ ಚೈನ್ ಡಿವೈಸ್

73 1915ರಲ್ಲಿ ಅಖಿಲ ಭಾರತ ಹಿಂದೂ ಮಹಾಸಭಾದ ಮೊದಲ ಅಧಿವೇಶನದ ಅಧ್ಯಕ್ಷರು ಯಾರು?
ಎ) ಲಾಲಾ ಲಜಪತ್ ರಾಯ್
ಬಿ) ಮದನ್ ಮೋಹನ್ ಮಾಲವೀಯ
ಸಿ) ಎನ್.ಸಿ.ಕೇಳ್ಕರ್
ಡಿ) ಮಹಾರಾಜಾ ಕಾಸಿಮ್ ಬಜಾರ್

74 ಅತ್ಯಂತ ದೊಡ್ಡ ಪ್ರಮಾಣದಲ್ಲಿ ಹಿಂಸಾತ್ಮಕ ರಾಷ್ಟ್ರೀಯತೆಯು ಈ ಕೆಳಕಂಡ ಯಾವುದರ ವಿರುದ್ಧ ವ್ಯಕ್ತವಾಯಿತು?
ಎ) ಸಿಡಿಸಿಯಸ್ ಮೀಟಿಂಗ್ ಆಕ್ಟ್ 1907
ಬಿ) ಬೆಂಗಾಲಿನ ವಿಭಜನೆ, 1905
ಸಿ) ಭಾರತೀಯ ಕೌನ್ಸಿಲ್ ಕಾನೂನು 1892
ಡಿ) ಅಫಿಶಿಯಲ್ ಸೀಕ್ರೆಟ್ಸ್ ಕಾನೂನು, 1904

75 ಮೃದು ಧೋರಣೆಯ ಸ್ವಾತಂತ್ರ್ಯ ಸೇನಾನಿಗಳು ಬೆಂಗಾಲ್ ವಿಭಜನೆಯ ವಿರುದ್ಧ ಸರ್ಕಾರದ ಮೇಲೆ ಒತ್ತಡ ಹೇರಲು ಈ ಕೆಳಕಂಡ ಯಾವ ರಾಜಕೀಯ ಅಸ್ತ್ರವನ್ನು ಬಳಸಿದರು?
ಎ) ಅಸಹಕಾರ
ಬಿ) ಸತ್ಯಾಗ್ರಹ
ಸಿ) ಸ್ವದೇಶಿ ಮತ್ತು ಬಹಿಷ್ಕಾರ
ಡಿ) ಸಿವಿಲ್ ಡಿಸ್ಒಬಿಡಿಯೆನ್ಸ್

76 ಪ್ರಪಂಚದ ಮೊದಲ ಮಹಾಯುದ್ಧದ ಕಾಲದಲ್ಲಿ ಭಾರತದಲ್ಲಿ ಆರಂಭವಾದ ಪ್ರಮುಖ ಚಳುವಳಿ
ಎ) ಸ್ವದೇಶಿ ಮತ್ತು ಬಹಿಷ್ಕಾರ
ಬಿ) ವಿಭಜನಾ ಚಳವಳಿ
ಸಿ) ಹೋಮ್ ರೋಲ್ ಚಳವಳಿ
ಡಿ) ಸ್ವರಾಜ್ಯ ಪಕ್ಷದ ಚಳವಳಿ

77 ರಾಜ್ಯ ಹೈಕೋರ್ಟ್‌ನ ಈಗಿನ ಮುಖ್ಯ ನ್ಯಾಯಾಧೀಶರು
ಎ) ಜಸ್ಟೀಸ್ ವಿಕ್ರಂಜಿತ್ ಸೇನ್
ಬಿ) ಜಸ್ಟೀಸ್ ಸಭಾಹಿತ್
ಸಿ) ಜಸ್ಟೀಸ್ ಕುಮಾರ್
ಡಿ) ಜಸ್ಟೀಸ್ ಕೆ.ಜಿ. ಬಾಲಕೃಷ್ಣನ್

78 ಕಳಸಾ ಬಂಡೂರಿ ನಾಲಾ ಯೋಜನೆ ಈ ಎರಡೂ ರಾಜ್ಯಗಳಿಗೆ ಸಂಬಂಧಿಸಿದೆ.
ಎ) ಕರ್ನಾಟಕ ಮತ್ತು ಗೋವ
ಬಿ) ಕರ್ನಾಟಕ ಮತ್ತು ಮಹಾರಾಷ್ಟ್ರ
ಸಿ) ಕರ್ನಾಟಕ ಮತ್ತು ಕೇರಳ
ಡಿ) ಕೇರಳ ಮತ್ತು ಗೋವ

79 ಭಾರತ ಮತ್ತು ಅಪಘಾನಿಸ್ಥಾನದ ಭೂ ಗಡಿಯನ್ನು ಬೇರ್ಪಡಿಸುವ ರೇಖೆ
ಎ) ರ್‍ಯಾಡ್ ಕ್ಲಿಫ್ ರೇಖೆ
ಬಿ) ಡ್ಯೂರಾಂಡ್ ರೇಖೆ
ಸಿ) ಮ್ಯಾಕ್‌ಮೋಹನ್ ರೇಖೆ
ಡಿ) ಯಾವುದೂ ಅಲ್ಲ.

80 63ನೇ ಗಣರಾಜ್ಯೋತ್ಸವದ ನಿಮಿತ್ತ ಭಾರತ ಸರ್ಕಾರವು ಪದ್ಮವಿಭೂಷಣ ಪ್ರಶಸ್ತಿಯನ್ನು ಮರಣೋತ್ತರವಾಗಿ ಯಾರಿಗೆ ನೀಡಿತು?
ಎ) ದಿ. ಡಾ॥ ಭೂಪೇನ್ ಹಜಾರಿಕಾ
ಬಿ) ದಿ.ಪಿ.ವಿ. ನರಸಿಂಹರಾವ್
ಸಿ) ದಿ. ರಾಜೀವ್‌ಗಾಂಧಿ
ಡಿ) ದಿ.ಬಿ.ಎಂ. ಬಾಲಯೋಗಿ

UJWALA ACADE
# 784, Srishti-School of Business I
Outer Ring Road, Hosakerehalli (
B.S.K. 3rd Stage, BENGALURU - 5

81 ಎಲ್ಲಾ ಮೂರು ದುಂಡು ಮೇಜಿನ ಪರಿಷತ್ತಿನ ಸಭೆಗಳಿಗೆ ಭಾಗವಹಿಸಿದ್ದವರು
ಎ) ಡಾ॥ ಬಿ.ಆರ್. ಅಂಬೇಡ್ಕರ್
ಬಿ) ಎಂ.ಎ. ಜಿನ್ನಾ
ಸಿ) ಎಂ.ಕೆ. ಗಾಂಧಿ
ಡಿ) ಅನಿಬೆಸೆಂಟ್

82 "ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ" ಎಂದು ಹೇಳಿದರು.
ಎ) ಸುಭಾಷ್ ಚಂದ್ರಬೋಸ್
ಬಿ) ಭಗತ್ ಸಿಂಗ್
ಸಿ) ಸರ್ದಾರ್ ವಲ್ಲಭಾಯ್ ಪಟೇಲ್
ಡಿ) ಜಯಪ್ರಕಾಶ್ ನಾರಾಯಣ್

83 ಭಾರತಕ್ಕೆ ಕ್ರಿಪ್ಸ್ ಮಿಷನ್ ಯಾರ ಅವಧಿಯಲ್ಲಿ ಭೇಟಿ ನೀಡಿತು?
ಎ) ಲಾರ್ಡ್ ಮೌಂಟ್‌ಬ್ಯಾಟನ್
ಬಿ) ಲಾರ್ಡ್ ವೆವೆಲ್
ಸಿ) ಲಾರ್ಡ್ ಲಿನ್ಲಿತ್‌ಗೊ
ಡಿ) ಲಾರ್ಡ್ ವೆಲ್ಲಿಂಗ್‌ಟನ್

84 ಭಾರತ ಸ್ವಾತಂತ್ರಗೊಂಡ ಸಂದರ್ಭದಲ್ಲಿ ಇಂಗ್ಲೆಂಡಿನ ಪ್ರಧಾನಿಯಾಗಿದದವರು ಯಾರು?
ಎ) ಲಾರ್ಡ್ ಮೌಂಟ್ ಬ್ಯಾಟನ್
ಬಿ) ವಿನ್‌ಸ್ಟನ್ ಚರ್ಚಿಲ್
ಸಿ) ಲಾರ್ಡ್ ಅಟ್ಲೆ
ಡಿ) ಮೇಲಿನ ಯಾರೂ ಅಲ್ಲ

85 ಆಸ್ತಿಯ ಹಕ್ಕು ಈಗ
ಎ) ಮೂಲಭೂತ ಹಕ್ಕು
ಬಿ) ಕಾನೂನಿನ ಹಕ್ಕು
ಸಿ) ಸಂವಿಧಾನ ಹಕ್ಕು
ಡಿ) ಮೇಲಿನ ಎಲ್ಲವೂ

86 ಯಾವುದೇ ಒಬ್ಬ ವ್ಯಕ್ತಿಯನ್ನು ಒಂದೇ ರೀತಿಯ ಅಪರಾಧಕ್ಕೆ ಒಂದಕ್ಕಿಂತ ಹೆಚ್ಚು ಸಾರಿ ಶಿಕ್ಷಿಸುವಂತಿಲ್ಲ ಎಂಬ ತತ್ವವನ್ನು ಪ್ರತಿಪಾದಿಸುವುದು.
ಎ) ಕಠಿಣ ಕಾನೂನು
ಬಿ) ಒತ್ತಾಯ ಪೂರ್ವಕ ಸಾಕ್ಷ್ಯ
ಸಿ) ದ್ವಯ ಗಂಡಾಂತರ (ಡಬಲ್ ಜಿಯೋಪಾರ್ಡಿ)
ಡಿ) ಯಾವುದೂ ಅಲ್ಲ

87 ಧರ್ಮಸ್ಥಳದ ಮೂಲ ದೈವ
ಎ) ಮುಂಜುನಾಥ
ಬಿ) ಅಣ್ಣಪ್ಪ
ಸಿ) ಧೂಮಾವತಿ
ಡಿ) ಕೋಟಿ–ಚೆನ್ನಯ್ಯ

88 ಒಬ್ಬ ಆರೋಪಿಗೆ ಆತನ ಬಂಧನದ ಕಾರಣ ತಿಳಿಸುವುದು.
ಎ) ಶಾಸನಬದ್ಧ
ಬಿ) ನಿರ್ದೇಶಿತ
ಸಿ) ವಿವೇಚನೆ ಒಳಪಟ್ಟಿದ್ದು
ಡಿ) ಯಾವುದು ಅಲ್ಲ.

89 (x-a) (x-b) (x-c) (x-z) = ?
ಎ) 1
ಬಿ) 0
ಸಿ) á
ಡಿ) ಉತ್ತರಿಸಲು ಆಗುವುದಿಲ್ಲ.


---

72) ಎ 73) ಡಿ 74) ಬಿ 75) ಸಿ 76) ಸಿ 77) ಎ 78) ಎ 79) ಬಿ 80) ಎ
81) ಎ 82) ಎ 83) ಸಿ 84) ಸಿ 85) ಬಿ 86) ಸಿ 87) ಬಿ 88) ಎ 89) ಬಿ




www.kpscvaani.com
Scanned by CamScanner

90 ಚೌಕಾಕಾರದ ಹಾಳೆಯೊಂದನ್ನು ಮಡಚಿ ಅದರಲ್ಲಿ ತೂತೊಂದನ್ನು ಮಾಡಲಾಯಿತು. ಈ ಕೆಳಕಾಣುವ ಚಿತ್ರದಲ್ಲಿ ಚುಕ್ಕೆಗಳಿಂದ ಹಾಕಿರುವ ಗೆರೆಯು ಆ ಹಾಳೆಯು ಮಡಚದೆ ಇದ್ದಾಗಿನ ಸ್ಥಿತಿಯನ್ನು ತೋರಿಸುತ್ತದೆ. ದಪ್ಪ ಕಪ್ಪು ಗೆರೆಯು ಹಾಳೆಯು ಮಡಿಚದೆ ಇದ್ದಾಗಿನ ಸ್ಥಿತಿಯನ್ನು ತೋರುತ್ತದೆ. ಮತ್ತು ಅದರಲ್ಲಿರುವ ಕಪ್ಪು ಚುಕ್ಕೆಯು ಅದರಲ್ಲಿ ಮಾಡಲಾಗಿರುವ ತೂತನ್ನು ತೋರುತ್ತದೆ. ಹಾಗಾದರೆ ಉತ್ತರದಲ್ಲಿರುವ ಯಾವ
ಚಿತ್ರವು ಹಾಳೆಯನ್ನು ಬಿಚ್ಚಿದ್ದಾಗಿನ ಸ್ಥಿತಿಯನ್ನು ತೋರಿಸುತ್ತದೆ?



91 ಈ ಕೆಳಕಾಣುವ ಚಿತ್ರದಲ್ಲಿ ಎಷ್ಟು ಚೌಕಗಳಿವೆ?



ಎ) 16
ಬಿ) 17
ಸಿ) 28
ಡಿ) 30


92 ಒಂದು ನಾಣ್ಯವನ್ನು ಐದು ಬಾರಿ ಚಿಮ್ಮಿದಾಗ ಅದು ಕನಿಷ್ಠ ಮೂರು ಬಾರಿಯಾದರೂ ಸತತವಾಗಿ ಹೆಡ್ ತೋರಿಸುವ ಸಂಭವನೀಯತೆ ಏನು?
ಎ) 1/4 ಬಿ) 3/10 ಸಿ) 1/8 ಡಿ) 1/5

93 ನೀರಿಗಿಂತ ಪಾದರಸವನ್ನು ಉಷ್ಣತಾ ಮಾಪಕದ ದ್ರವವಾಗಿ ಉಪಯೋಗಿಸಲು ಕಾರಣ
ಎ) ಪಾದರಸದ ನಿರ್ದಿಷ್ಟ ಶಾಖವು ನೀರಿಗಿಂತ ಕಡಿಮೆ ಇರುತ್ತದೆ.
ಬಿ) ಪಾದರಸದ ನಿರ್ದಿಷ್ಟ ಶಾಖವು ನೀರಿಗಿಂತ ಅಧಿಕವಾಗಿರುತ್ತದೆ.
ಸಿ) ಪಾದರಸವು ನೀರಿಗಿಂತ ಹೆಚ್ಚು ಪಾರದರ್ಶಕ
ಡಿ) ಪಾದರಸದ ಸಾಂದ್ರತೆ ನೀರಿಗಿಂತ ಹೆಚ್ಚಾಗಿರುತ್ತದೆ.

94 ಭೂಮಿ ಮತ್ತು ಚಂದ್ರನ ನಡುವಿನ ಅಂತರ ಹಠಾತ್ತಾಗಿ ಅರ್ಧಕ್ಕೆ ಇಳಿದರೆ ಇವೆರಡರ ನಡುವಿನ ಗುರುತ್ವಾಕರ್ಷಣೆಯ ಬಲವು
ಎ) ಯಾವುದೇ ಬದಲಾವಣೆ ಆಗುವುದಿಲ್ಲ
ಬಿ) ಅರ್ಧ ಆಗುತ್ತದೆ
ಸಿ) 1/4ರಷ್ಟಾಗುತ್ತದೆ
ಡಿ) 4ರಷ್ಟಾಗುತ್ತದೆ.

95 ಊರುಕೇರಿ ಬರೆದವರು
ಎ) ಸಿದ್ದಲಿಂಗಯ್ಯ ಬಿ) ದೇವನೂರು ಮಹಾದೇವ ಸಿ) ಸತ್ಯಾನಂದ ಪಾತ್ರೋಟ ಡಿ) ಅರವಿಂದ ಮಾಲಗತ್ತಿ

96 ಸ್ಪಟಿಕ ರಾಸಾಯನಿಕ ಹೆಸರು
ಎ) ಕ್ಯಾಲ್ಸಿಯಂ ಆಕ್ಸೈಡ್ ಬಿ) ಕ್ಯಾಲ್ಸಿಯಂ ಫಾಸ್ಫೇಟ್ ಸಿ) [illegible] ಡಿ) [illegible]



a) b) c) d)

97 ಒಂದೇ ಗುಂಪಿಗೆ ಸೇರದ ಕೆಳಗಿನ ಪದ ಯಾವುದು?
ಎ) ಸುಖ ಬಿ) ಕೋಪ

98 ಗಿಡವನ್ನು ಹಸಿರು ಎಂದರೆ, ಹಸಿರನ್ನು ಮಳೆ ಎಂದರೆ, ಮಳೆಯನ್ನು ನೀರು ಕರೆದರೆ ಮೀನುಗಳು ಎಲ್ಲಿ ಈಜುತ್ತವೆ?
ಎ) ನೀರು ಬಿ) ಮಳೆ ಸಿ) ಗಾಳಿ ಡಿ) ನೀಲಿ

99 ಮರವಂತೆಯು ಯಾವ ಜಿಲ್ಲೆಯಲ್ಲಿ ಇದೆ?
ಎ) ಉಡುಪಿ ಬಿ) ದಕ್ಷಿಣ ಕನ್ನಡ ಸಿ) ಶಿವಮೊಗ್ಗ ಡಿ) ಮಂಡ್ಯ

100 ಭೂತ ಕನ್ನಡಿ ಮತ್ತು ಗನ್ ಪೌಡರ್‌ನ್ನು ಕಂಡು ಹಿಡಿದವರು ಯಾರು?
ಎ) ರೋಜರ್ ಬೇಕಾನ್ ಬಿ) ರುಡಾಲ್ಫ್ ಡಿಸೆಲ್ ಸಿ) ಸಿಗ್ಮಂಡ್ ಫ್ರಾಯ್ಡ್ ಡಿ) ರಾಬರ್ಟ್ ಬಾಯ್ಲ್

90) ಸಿ 91) ಡಿ 92) ಎ 93) ಸಿ 94) ಡಿ 95) ಎ 96) ಡಿ 97) ಬಿ 98) ಸಿ
99) ಎ 100) ಎ



www.kpscvaani.com
Scanned by CamScanner